# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 293 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11-12-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ರಾಷ್ಟ್ರೀಯ ಹೆದ್ದಾರಿ ಶಿರಾಡಿಘಾಟ್‌ನಿಂದ ಬಿ.ಸಿ. ರೋಡ್ ರಸ್ತೆ ಕಾಮಗಾರಿಯು ಇನ್ನೂ ಪೂರ್ಣಗೊಳ್ಳಲು ಎಷ್ಟು ಸಮಯ ಬೇಕಾಗುವುದು; (ವಿವರ ನೀಡುವುದು)</td><td rowspan="3">ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು ವಲಯ ವ್ಯಾಪ್ತಿಗೆ ಸಂಬಂಧಿಸಿದ ರಾಷ್ಟ್ರೀಯ ಹೆದ್ದಾರಿ-75 ರ ಬೆಂಗಳೂರು - ಮಂಗಳೂರು ರಸ್ತೆಯ ಕಿ.ಮೀ 237.00 ರಿಂದ ಕಿ.ಮೀ 263.00 (ಶಿರಾಡಿಘಾಟ್ - ಮಾರನಹಳ್ಳಿಯಿಂದ ಅಡ್ಡಹೊಳೆ) ವರೆಗಿನ ರಸ್ತೆಯು ವಾಹನಗಳ ಸಂಚಾರಕ್ಕೆ ಸುಗಮವಾಗಿದೆ.<br><br>ಕಿ.ಮೀ.263.00 ರಿಂದ ಬಿ.ಸಿ.ರಸ್ತೆಯವರೆಗಿನ ಕಾರ್ಯಭಾರವು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರ ವ್ಯಾಪ್ತಿಗೆ ಒಳಪಟ್ಟಿದ್ದು, ಅವರು ವರದಿ ಮಾಡಿರುವಂತೆ ಸದರಿ ರಸ್ತೆಯನ್ನು 2 ಪಥದಿಂದ 4 ಪಥವನ್ನಾಗಿ ಅಡ್ಡಹೊಳೆಯಿಂದ-ಬಂಟ್ವಾಳ ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು 2 ಪ್ಯಾಕೇಜ್‌ಗಳಲ್ಲಿ ಕೈಗೊಂಡಿರುತ್ತಾರೆ. ಅವುಗಳ ವಿವರ ಈ ಕೆಳಕಂಡಂತಿದೆ.<br><u>ಪ್ಯಾಕೇಜ್-1</u><br>ಅಡ್ಡಹೊಳೆ (ಗುಂಡ್ಯ ಬಳಿ) ಯಿಂದ ಬಂಟ್ವಾಳ ಕ್ರಾಸ್ ರಾಷ್ಟ್ರೀಯ ಹೆದ್ದಾರಿ-75 ರ 255.703 ಕಿ.ಮೀ. ದಿಂದ 270.27 ಕಿ.ಮೀ. ವರೆಗೆ ಒಟ್ಟು 15.13 ಕಿ.ಮೀ. ಉದ್ದವಿದ್ದು, ಅದರಲ್ಲಿ 4 ಪಥದ ರಸ್ತೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಕಿ.ಮೀ.14.30 ನಷ್ಟು ಪೂರ್ಣಗೊಂಡಿರುತ್ತದೆ. ಸದರಿ ಕಾಮಗಾರಿಯು ದಿನಾಂಕ:30-09-2023 ರಂದು ಪೂರ್ಣಗೊಳ್ಳಬೇಕಿದ್ದು, ಈ ಯೋಜನೆಯು ಕೆಳಕಂಡ ಕಾರಣಗಳಿಂದ ಅಡಚಣೆವುಂಟಾಗಿ ವಿಳಂಬವಾಗಿರುತ್ತದೆ.<br>• Seasonal ಮತ್ತು Unseasonal ಮಳೆ<br>• ಸ್ಥಳೀಯ ಜನರ ಬೇಡಿಕೆಯಿಂದಾಗಿ ಹೆಚ್ಚುವರಿ Structures /ಸೌಕರ್ಯಗಳನ್ನು ಅಳವಡಿಸಿಕೊಳ್ಳಬೇಕಾಗಿದ್ದುದರಿಂದ ಅನುಮೋದಿತ ಕಾಮಗಾರಿಯಲ್ಲಿ Change of Scope ಗೆ ಕಾರಣವಾಯಿತು.<br>• 2.5315 ಹೆಕ್ಟೇರ್ ಅರಣ್ಯ ಭೂಮಿಗೆ ಬದಲು ಭೂಮಿ<br>• ಮಾನ್ಯ ಕರ್ನಾಟಕ ಹೈಕೋರ್ಟ್‌ನ ತಡೆ ಆದೇಶ</td></tr>
<tr><td>ಆ</td><td>ಪ್ರಸ್ತುತ ರಸ್ತೆಯಲ್ಲಿ ಸಂಚಾರ ಮಾಡಲು ಸಾಧ್ಯವಾಗದ ಪರಿಸ್ಥಿತಿ ಇದ್ದು, ಸರ್ಕಾರವು ಸುಗಮ ಸಂಚಾರಿ ಬದಲಿ ರಸ್ತೆ ವ್ಯವಸ್ಥೆ ಮಾಡದೇ ಇರಲು ಕಾರಣಗಳೇನು ಹಾಗೂ ಕಾಮಗಾರಿಯ ಟೆಂಡರ್‌ನ್ನು ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಯಲ್ಲಿಯೇ ನಿರ್ವಹಿಸಲು ಅವಕಾಶ ಮಾಡಲಾಗಿದೆಯೇ; ಇಲ್ಲದೇ ಇದ್ದಲ್ಲಿ ಕಾರಣಗಳೇನು; ಇದ್ದರೆ ರಸ್ತೆ ಕಾಮಗಾರಿ ಮಾಡದೇ ಇರಲು ಕಾರಣಗಳೇನು;</td></tr>
<tr><td>ಇ</td><td>ಬದಲಿ ರಸ್ತೆ ವ್ಯವಸ್ಥೆ ಮಾರ್ಗ ಇಲ್ಲದೇ ಸರಿಯಾಗಿ ಕಾಮಗಾರಿ ನಡೆಯದ ಕಾರಣ ಅನೇಕ ಅಪಘಾತಗಳು ಆಗುತ್ತಿರುವುದರಿಂದ ಈ ಬಗ್ಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; ಅವರ ವಿರುದ್ಧ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)</td></tr>
</table>

| | | |
|---|---|---|
| | | ಕಾಮಗಾರಿಯನ್ನು ದಿನಾಂಕ:31.03.2025 ರೊಳಗೆ ಪೂರ್ಣಗೊಳಿಸಲು ಗುರಿ ಹೊಂದಲಾಗಿದೆ.<br><br>ಪ್ರಸ್ತುತ ಹಾಲಿ ಇರುವ ರಸ್ತೆಯನ್ನು ಸಂಚಾರ ಯೋಗ್ಯ ಸ್ಥಿತಿಯಲ್ಲಿ ನಿರ್ವಹಿಸಲಾಗುತ್ತಿದೆ.<br><br>**ಪ್ಯಾಕೇಜ್–2:**<br>ಅಡ್ಡಹೊಳೆ (ಗುಂಡ್ಯ ಬಳಿ) ಯಿಂದ ಬಂಟ್ವಾಳ ಕ್ರಾಸ್ ರಾಷ್ಟ್ರೀಯ ಹೆದ್ದಾರಿ–75 ರ 270.270 ಕಿಮೀ.ಯಿಂದ 318.55 ಕಿ.ಮೀ. ವರೆಗೆ ಮತ್ತು ಕಲ್ಲಡ್ಕ ಪಟ್ಟಣದಲ್ಲಿ ಫ್ಲೈ ಓವರ್ ಸೇರಿದಂತೆ 311.57 ಕಿ.ಮೀ. ಯಿಂದ 313.67 ಕಿ.ಮೀ.ವರೆಗೆ 4 ಪಥದ ರಸ್ತೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಸದರಿ ಕಾಮಗಾರಿಯು ದಿನಾಂಕ:22–11–2023 ರಂದು ಪೂರ್ಣಗೊಳ್ಳಬೇಕಿದ್ದು, ಈ ಯೋಜನೆಯು ಸ್ಥಳೀಯ ಜನರ ಬೇಡಿಕೆಯಿಂದಾಗಿ ಹೆಚ್ಚುವರಿ Structures/ಸೌಕರ್ಯಗಳನ್ನು ಅಳವಡಿಸಿಕೊಳ್ಳ ಬೇಕಾಗಿದ್ದುದರಿಂದ ಅನುಮೋದಿತ ಕಾಮಗಾರಿಯಲ್ಲಿ Change of Scope ಗೆ ಕಾರಣವಾಗಿ ವಿಳಂಬವಾಗಿರುತ್ತದೆ.<br><br>ಒಟ್ಟು ರಸ್ತೆಯ ಉದ್ದ – 48.485 ಕಿ.ಮೀ.<br>ಪೂರ್ಣಗೊಂಡ ರಸ್ತೆಯ ಉದ್ದ – 32.40 ಕಿ.ಮೀ.<br>ಪೂರ್ಣಗೊಳ್ಳುವ ಸಂಭವನೀಯ ದಿನಾಂಕ: 31.03.2025<br>ಪ್ರಸ್ತುತ ಹಾಲಿ ಇರುವ ರಸ್ತೆಯನ್ನು ಸಂಚಾರ ಯೋಗ್ಯ ಸ್ಥಿತಿಯಲ್ಲಿ ನಿರ್ವಹಿಸಲಾಗುತ್ತಿದೆ. |

ಸಂಖ್ಯೆ: ಲೋಇ 328 ಸಿಎನ್‌ಹೆಚ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು